ದಿನಾಂಕಃ 27.02.2024 ಓ.ಎಸ್. 4/2012 ರಲ್ಲಿ

ಡಿ.ಡಬ್ಲ್ಯೂ-2(ಅಶ್ವಿನಿ)

ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು 4 ನೇ ಪ್ರತಿವಾದಿ ಪರ ಶ್ರೀ ಕೆ.ಬಿ.ವಿ ವಕೀಲರಿಂದಃ-

ಡಿ. ರಾಜಣ್ಣನವರು ನಮ್ಮ ತಂದೆಯ ಜೊತೆ ಚನ್ನಾಗಿಯೇ ಇರುತ್ತಾರೆ ಎಂದರೆ ಸರಿ. ಸದರಿ ಡಿ. ರಾಜಣ್ಣನವರು 4 ನೇ ಪ್ರತಿವಾದಿಗೆ ಆದ ನಿಡಿ-18 ರ ಕ್ರಯದ ಕರಾರು ಪತ್ರಕ್ಕೆ ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅದೇ ರೀತಿ ನಮ್ಮ ತಾಯಿಯಾದ 2 ನೇ ಪ್ರತಿವಾದಿರವರು ಸಹ ನಿಡಿ-18 ಕ್ಕೆ ಸಾಕ್ಷಿ ಸಹಿ ಮಾಡಿರುತ್ತಾರೆ ಎಂದರೆ ಸರಿ.

ಪ್ರಸ್ತುತ ದಾವೆಯ 4 ನೇ ಪ್ರತಿವಾದಿಯು ಇದೇ ನ್ಯಾಯಾಲಯದಲ್ಲಿ ಓ.ಎಸ್. 124/2015 ನಮ್ಮ ಕುಟುಂಬದದ ವಿರುದ್ಧ ಕ್ರಯದ ಕರಾರು ಪತ್ರದ ನಿರ್ದಿಷ್ಟ ಪರಿಹಾರ ಕೋರಿ ದಾವೆ ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿಯು ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಮ್ಮ ತಂದೆಯಾದ 1 ನೇ ಪ್ರತಿವಾದಿರವರು 4 ನೇ ಪ್ರತಿವಾದಿಯಿಂದ ಚೆಕ್ ಮತ್ತು ನಗದು ರೂಪದಲ್ಲಿ ಹಣವನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ತಂದೆಯವರು ಪಡೆದುಕೊಂಡ ಚೆಕ್ ಗಳನ್ನು ಅವರ ಖಾತೆಗೆ ಜಮಾ ಮಾಡಿ ಹಣವನ್ನು ಡ್ರಾ ಮಾಡಿಕೊಂಡಿರುತ್ತಾರೆ ಡಎಂದರೆ ಸರಿಯಲ್ಲ.

ನಾನು ನನ್ನ ತಂದೆ ತಾಯಿಯ ಜೊತೆ ಸೇರಿ 4 ನೇ ಪ್ರತಿವಾದಿಗೆ ಸಾಮಾನ್ಯ ಅಧಿಕಾರ ಪತ್ರವನ್ನು ಬರೆಸಿಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

ಸಾಕ್ಷಿಗೆ ನಿಡಿ-23 ನ್ನು ತೋರಿಸಿ ಸದರಿ ದಾಖಲೆಯಲ್ಲಿ ಕುಮಾರಿ ಅಶ್ವಿನಿ ಬಿನ್ ರಾವಮೂರ್ತಿ ಎಂದು ಬರೆಸಿದ್ದು, ಸದರಿ ಕುಮಾರಿ ಅಶ್ವಿನಿ ನೀವೇ ಅಲ್ಲವೇ ಎಂದರೆ ಸಾಕ್ಷಿ ಅದು ನಾನು ಅಲ್ಲ ಎಂದು ನುಡಿಯುತ್ತಾರೆ.

ನ್ಯಾಯಾಲಯದ ಪ್ರಶ್ನೆಃ ಸದರಿ ದಾಖಲೆಯಲ್ಲಿ ಇರುವ ಅಶ್ವಿನಿ ಎಂಬ ಸಹಿ ನಿಮ್ಮದೇ?

ಉತ್ತರಃ ಸಾಕ್ಷಿಯು ಸದರಿ ಸಹಿಯು ನನ್ನದೆ ಆದರೆ ನಮ್ಮ ತಂದೆಯವರು ಸಹಿ ಹಾಕು ಎಂದು ಹೇಳಿದ್ದರಿಂದ ನಾನು ಸಹಿ ಮಾಡಿರುತ್ತೇನೆ ಎಂದು ನುಡಿದು ದಾಖಲೆಯ ಬಗ್ಗೆ ನನಗೆ ಏನೂ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

ಸಾಕ್ಷಿ ಸದರಿ ದಾಖಲೆಯಲ್ಲಿನ 5 ನೇ ಪುಟದ ಹಿಂಬದಿಯಲ್ಲಿರುವ 4 ನೇ ಅಶ್ವಿನಿ ಬಿನ್ ರಾಮಮೂರ್ತಿ ಜಾಗದಲ್ಲಿ ಇರುವ ಫೋಟೋ ಮತ್ತು ಸಹಿಯನ್ನು ನೋಡಿ ಒಪ್ಪಿಕೊಳ್ಳುತ್ತಾರೆ. ಸಾಕ್ಷಿ ಒಪ್ಪಿಕೊಂಡ ಕಾರಣ ಸದರಿ ಫೋಟೋ ಮತ್ತು ಸಹಿಯನ್ನು ನಿಡಿ-23(ಎ) ಮತ್ತು ನಿಡಿ-23(ಬಿ) ಎಂದು ಗುರುತಿಸಲಾಯಿತು. ನನಗೆ ನಿಡಿ-23 ರ ದಾಖಲೆಯ ಬಗ್ಗೆ ಎಲ್ಲಾ ವಿಷಯಗಳು ಚೆನ್ನಾಗಿಯೇ ತಿಳಿದು ಸಹಿ ಮಾಡಿದ್ದರೂ ಸಹ ತಂದೆಯವರ ಮಾತು ಕೇಳಿ ಸಹಿ ಮಾಡಿರುತ್ತೇನೆ ಅದರ ಬಗ್ಗೆ ಏನೂ ಗೊತ್ತಿರುವುದಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ನೀವು ಮತ್ತು ನಿಮ್ಮ ತಂದೆ ತಾಯಿ ಹೋಗಿ ನಿಡಿ-23 ರಂತೆ ನೋಂದಣಿ ಕರಾರು ಪತ್ರವನ್ನು ಮಾಡಿಸಿಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಹೌದು ನಮ್ಮ ತಂದೆಯವರು ಕರೆದುಕೊಂಡು ಹೋಗಿ ಸಹಿ ಮಾಡಿಸಿರುತ್ತಾರೆ ಎಂದು ನುಡಿಯುತ್ತಾರೆ. ಸಬ್ ರಿಜಿಸ್ಟ್ರಾರ್

ಕಛೇರಿಯಲ್ಲಿ ನೋಂದಣಿ ಅಧಿಕಾರಿಗಳು ನಿಡಿ-23 ರಲ್ಲಿ ಇರುವ ಮಾಹಿತಿಯನ್ನು ನಿಮಗೆ ತಿಳಿಸಿ ನಂತರವೇ ನೀವು ಅದನ್ನು ಒಪ್ಪಿಕೊಂಡು ಸಹಿ ಮಾಡಿರುತ್ತೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಮ್ಮ ಲಿಖಿತ ಹೇಳಿಕೆಯಲ್ಲಿ ನಿಮ್ಮ ತಂದೆಯವರು ಕರೆದುಕೊಂಡು ಹೋಗಿ ನಿಡಿ-23 ರಲ್ಲಿ ಸಹಿ ಮಾಡಿಸಿರುತ್ತಾರೆ ಎಂದು ಬರೆಸಿರುತ್ತೀರಾ ಎಂದರೆ ಸಾಕ್ಷಿ ಅದನ್ನು ಬರೆಸಿರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ಸದರಿ ವಿಷಯವನ್ನು 2010 ರಲ್ಲಿ ಕರಾರು ಪತ್ರವಾದ ಬಗ್ಗೆ ನಿಮ್ಮ ವಕೀಲರ ಬಳಿ ತಿಳಿಸಿರುತ್ತೀರಾ ಎಂದರೆ ಸಾಕ್ಷಿಯು ದಾವೆಯನ್ನು ಸಲ್ಲಿಸಿದ ನಂತರ ನಮ್ಮ ವಕೀಲರಿಗೆ ತಿಳಿಸಿರುತ್ತೇನೆ ಎಂದು ನುಡಿಯುತ್ತಾರೆ.

ನನ್ನ ಲಿಖಿತ ಹೇಳಿಕೆಯಲ್ಲಿ ಏನು ಬರೆಯಲಾಗಿರುತ್ತದೆ ಎಂದು ಓದಿ ತಿಳಿದುಕೊಂಡಿರುತ್ತೇನೆ. ನಿಡಿ-20 ನನ್ನ ಹಸ್ತಾಕ್ಷರದಲ್ಲಿ ಇದ್ದು, ಅದರಲ್ಲಿ ನನ್ನ ಸಹಿ ಇರುತ್ತದೆ ಎಂದರೆ ಸಾಕ್ಷಿ ಹೌದು ಎಂದು ನುಡಿದು ಅದನ್ನು ತಿದ್ದಿರುತ್ತಾರೆ ಎಂದು ನುಡಿಯುತ್ತಾರೆ. ನಿಡಿ-20 ರ ಬಗ್ಗೆ ನನ್ನ ಲಿಖಿತ ಹೇಳಿಕೆಯಲ್ಲಾಗಲೀ ಮತ್ತು ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಹೇಳಿರುವುದಿಲ್ಲ. ನಿಡಿ-20 ನ್ನು ನಮ್ಮ ತಂದೆಯವರು ಹೇಳಿದಂತೆ ನಾನು ಬರೆದಿರುತ್ತೇನೆ. ನಿಡಿ-23 ರ ಪುಟ 11 ರ ಕಂಡಿಕೆ 6 ರಲ್ಲಿ ನಿಡಿ-20 ರ ಬಗ್ಗೆ ಹೇಳಲಾಗಿರುತ್ತದೆ ಎಂದರೆ ಸಾಕ್ಷಿಯು ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 4 ನೇ ಪ್ರತಿವಾದಿರವರು ನಿಮಗೆ ಮತ್ತು ನಿಮ್ಮ ಕುಟುಂಬದವರಿಗೆ ನಿಡಿ-23 ರಂತೆ ಉಳಿಕೆ ಹಣ ರೂ. 17,75,000/-ಗಳನ್ನು ಕೊಡಲು ಬಾಕಿ ಇರುತ್ತದೆ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿರವರಿಗೆ ನಾನು ಮತ್ತು ನಮ್ಮ ಕುಟುಂಬದವರು

ಮಾಡಿಕೊಟ್ಟಿರುವಂತಹ ಎಲ್ಲಾ ಕರಾರು ಪತ್ರಗಳು ಕುಟುಂಬದ ಸಾಲವನ್ನು ತೀರಿಸಲು, ಮಕ್ಕಳ ಅಭಿವೃದ್ಧಿಗಾಗಿ ಮತ್ತು ಗೃಹಕೃತ್ಯದ ಖರ್ಚುಗಳಿಗಾಗಿ ಮಾಡಿಕೊಡಲಾಗಿರುತ್ತದೆ ಎಂದರೆ ಸಾಕ್ಷಿ ಅದು ಸುಳ್ಳು ಎಂದು ನುಡಿಯುತ್ತಾರೆ.

ಕಲ್ಲುಗೋಪಹಳ್ಳಿಯಲ್ಲಿ ನಿಮಗೆ ಮತ್ತು ನಿಮ್ಮ ತಂದೆಯವರಿಗೆ ಒಂದು ಹಳೆಯ ಮನೆ ಇತ್ತು ಎಂದರೆ ಸಾಕ್ಷಿಯು ಮೊದಲು ಇತ್ತು ಈಗಾಲೂ ಸಹ ಇದೆ ಎಂದು ನುಡಿಯುತ್ತಾರೆ. ನಿಡಿ-2 ರಿಂದ ನಿಡಿ-6 ರಂತೆ ಹಳೆ ಮನೆಯನ್ನು ಕೆಡವಿ ಹೊಸ ಮನೆ ಕಟ್ಟಲಾಗಿರುತ್ತದೆ ಎಂದರೆ ಸಾಕ್ಷಿ ಅದು ಸುಳ್ಳು ಎಂದು ನುಡಿದು ಮುಂದುವರೆದು, ಒಟ್ಟು ಕುಟುಂಬದಲ್ಲಿ ಭಾಗವಾಗಿದ್ದರಿಂದ ನಮ್ಮ ಭಾಗದ ಅನುಸಾರವಾಗಿ ಗೋಡೆಯನ್ನು ಕಟ್ಟಿಕೊಂಡಿರುತ್ತಾರೆ. ನಿಡಿ-2 ರಿಂದ ನಿಡಿ-6 ರಲ್ಲಿ ಕಾಣುತ್ತಿರುವ ಮನೆ ಹೊಸ ಮನೆಯಾಗಿರುತ್ತದೆ ಎಂದರೆ ಸರಿಯಲ್ಲ, ಸದರಿ ಮನೆಯ ಗೃಹ ಪ್ರವೇಶವನ್ನು ದಿನಾಂಕ 03.12.2007 ರಲ್ಲಿ ಅದು ಸುಳ್ಳು ಎಂದು ನುಡಿಯುತ್ತಾರೆ. ನಿಡಿ-5 ರ ಫೋಟೋದಲ್ಲ ಇರುವ ಕಲ್ಲಿನಲ್ಲ ನಮ್ಮ ಕುಟುಂಬದವರ ಎಲ್ಲರ ಹೆಸರು ಮತ್ತು ದಿನಾಂಕ 0312.2007 ಎಂದು ನಮೂದು ಇರುತ್ತದೆ ಎಂದರೆ ಸರಿ.

ನಿಡಿ-10 ರಿಂದ ನಿಡಿ-13 ರಂತೆ ಆಸ್ತಿಗಳು ನಮ್ಮ ತಂದೆಯವರ ಹೆಸರಿನಲ್ಲಿ ಇರುತ್ತದೆ ಎಂದರೆ ಸಾಕ್ಷಿಯು ಹೌದು ಎಂದು ನುಡಿದು ಈಗ ಸದರಿ ಆಸ್ತಿಯ ಬೆಂಗಳೂರು-ಮೈಸೂರು ಹೆದ್ದಾರಿಗೆ ಹೋಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಆಸ್ತಿಗಳು ಹೆದ್ದಾರಿಗಾಗಿ ಸರ್ಕಾರವು ಸ್ವಾಧೀನಪಡಿಕೊಂಡಿರುತ್ತದೆ ಎಂದು ತೋರಿಸಲು ನಾನು

ನ್ಯಾಯಾಲಯಕ್ಕೆ ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಡಿ-7 ರಿಂದ ನಿಡಿ-9 ದಾಖಲೆಗಳಂತೆ ಮನೆ ಆಸ್ತಿಗಳು ಎಲ್ಲಾ ನಮ್ಮ ತಂದೆಯವರ ಹೆಸರಿನಲ್ಲ ಇರುತ್ತವೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಮತ್ತು ನಮ್ಮ ತಂದೆಯ ಹೆಸರಿನಲ್ಲಿ ಮನೆಯ ಆಸ್ತಿಗಳು ಇರುವುದಿಲ್ಲ ಎಂದು ನುಡಿಯುತ್ತಾರೆ. ನಿಡಿ-51 ರಂತೆ ನಮ್ಮ ತಂದೆಯವರ ಹೆಸರಿಗೆ ಉರಗನಹಳ್ಳಿಯ ಶಿವಲಿಂಗಯ್ಯ ಲಕ್ಷಮ್ಮ ಮತ್ತು ಮಕ್ಕಳುಗಳಾದ ಪ್ರೇಮ ಮತ್ತು ಮಹೇಶ್ ರವರುಗಳು ನೋಂದಾಯಿತ ಸಾಮಾನ್ಯ ಅಧಿಕಾರ ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಅದು ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ಪುನಃ ಸದರಿ ದಾಖಲೆಯನ್ನು ತೋರಿಸಿ ಅದರಲ್ಲ ಇರುವ ತಂದೆಯ ಹೆಸರು ವಿಳಾಸ ನಮ್ಮ ತಂದೆಯವರ ವಿಳಾಸವಾಗಿರುತ್ತದೆ ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಗೊತ್ತಿಲ್ಲ ಆದರೆ ನಮ್ಮ ತಂದೆ ಹೆಸರು ಇರುತ್ತದೆ ಎಂದು ನುಡಿಯುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೋರಿದ ಕಾರಣ ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಮಹೇಶ್ ಬಿ.ಟಿ)
1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.